**ದಿನಾಂಕ: 21.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು : ಎದುರುದಾರ ಪರ ಶ್ರೀ. ಆರ್ ಪಿ ಎ ವಕೀಲರಿಂದ

ನನ್ನ ಪತಿ ಅಲ್ಲಾಭಕ್ಷ ಜೀವಿತ ಇದ್ದಾಗ ನಾನು ಇದೇ ನ್ಯಾಯಾಲಯದಲ್ಲಿ ಆತನ ವಿರುದ್ಧ Crl. Misc No.2/2017 ರಂತೆ ಕಲಂ 125 ಸಿ ಆರ್ ಪಿ ಸಿ ರಡಿಯಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ನಿಜ. ಸದರಿ ಪ್ರಕರಣದಲ್ಲಿ ಅಲ್ಲಾಭಕ್ಷ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸಿದ್ದ ಎಂದರೆ ನಿಜ. ಸದರಿ ತಕರಾರಿನಲ್ಲಿ ಅಲ್ಲಾಭಕ್ಷ ಇತನು ಈ ಮೊದಲೇ ಅಬ್ದುಲರಸೂದ ಅಲ್ಲಾಭಕ್ಷ ಧಾರವಾಡ ಎನ್ನುವವರನ್ನು ನಾನು ಮದುವೆಯಾಗಿದ್ದು ಸದರಿ ಮದುವೆಯಿಂದ ಮಹ್ಮದಸಾಧಿಕ, ಮಲ್ಲಿಕರೆಹಾನ ಮತ್ತು ಮುಸ್ತಾಕಅಹ್ಮದ ಮಕ್ಕಳನ್ನು ಹೊಂದಿದ್ದೆ ಅಂತಾ ಕಾಣಿಸಿದ್ದಾನೆ ಎಂದರೆ ಸರಿಯಲ್ಲ. ಅಬ್ದುಲರಸೂದ ಅಲ್ಲಾಭಕ್ಷ ಧಾರವಾಡ ಅವರ ವಿರುದ್ಧ ನಾನು ಇದೇ ನ್ಯಾಯಾಲಯದಲ್ಲಿ Crl. Misc No.35/2007 ರಂತೆ ಕಲಂ 125 ಸಿ ಆರ್ ಪಿ ಸಿ ರಡಿಯಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ಅರ್ಜಿ ದಿಃ 17.04.2008 ರಂದು ನನ್ನ ಪರವಾಗಿ ಆದೇಶವಾಗಿರುತ್ತದೆ ಎಂದರೆ ನಿಜ. ಸದರಿ ಆದೇಶದ ಅಮಲುಜಾರಿಗಾಗಿ ನಾನು Crl. Misc No.44/2008 ರಂತೆ ಕಲಂ 128 ಸಿ ಆರ್ ಪಿ ಸಿ ರಡಿಯಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ನಿಜ. ಮೇಲೆ ಹೇಳಿದ ಮಹ್ಮದಸಾಧಿಕ, ಮಲ್ಲಿಕರೆಹಾನ ಮತ್ತು ಮುಸ್ತಾಕಅಹ್ಮದ ಅವರ ವಿರುದ್ಧ ನಾನು ಜೀವನಾಂಶ ಕೋರಿ ಅರ್ಜಿ ಸಲ್ಲಿಸಿಲ್ಲ ಏಕೆಂದರೆ ಅವರು ನನ್ನ ಮಕ್ಕಳೇ ಅಲ್ಲ. ಈ ಅರ್ಜಿಯಲ್ಲಿ ಕಾಣಿಸಿದ ಎದುರುದಾರರನ್ನೇ ನಾನು ನನ್ನ ಮಕ್ಕಳಂತೆ ಸಾಕಿದ್ದೇನೆ ಎನ್ನುತ್ತಾರೆ. ನಾನು ಯಾವತ್ತಿಗೂ ಯಾವುದೇ ಮಕ್ಕಳನ್ನು ಜನ್ಮ ಕೊಟ್ಟಿದ್ದೆನಾ ಅಥವಾ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಸುಮಾರು 20 ವರ್ಷಗಳ ಹಿಂದೆ ನಾನು 8 ತಿಂಗಳ ಗರ್ಭಿಣಿ ಇದ್ದಾಗಲೇ ಹೊಟ್ಟೆಯಲ್ಲಿ ಮಗು ತೀರಿಹೋಗಿತ್ತು ಎನ್ನುತ್ತಾರೆ. ನನಗೆ ಕಾನೂನುಬದ್ಧವಾಗಿ ನನಗೆ ಹುಟ್ಟಿದ ಮಹ್ಮದಸಾಧಿಕ, ಮಲ್ಲಿಕರೆಹಾನ ಮತ್ತು ಮುಸ್ತಾಕಅಹ್ಮದ ಅಂತಾ ಮೂರು ಮಕ್ಕಳು ಇದ್ದರೂ ಕೂಡಾ ನನಗೆ ಸಂಬಂಧಪಡದ ಎದುರುದಾರರ ಮೇಲೆ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಎದುರುದಾರರನ್ನು ಸಾಕಿ ಸಲುಹಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಖಾಯಂ ಆಗಿ 30-32 ವರ್ಷದಿಂದ ಹಾನಗಲ್ ನ ದರ್ಗಾ ಓಣಿಯಲ್ಲಿ ಸುಸಜ್ಜಿತ ಆರ್ ಸಿ ಸಿ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸಾಕ್ಷಿಯು ನಾನು 30-35 ವರ್ಷದಲ್ಲಿ ಹಾನಗಲ್ ನಲ್ಲಿ ಖಾಯಂ ತರೀಖ ವಾಸವಿಲ್ಲ ಹಾಗೂ ನಾನು ಇಂದಿರಾ ನಗರದ ಒಂದು ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ ಎನ್ನುತ್ತಾರೆ. ಎದುರುದಾರರು ಪರಿಹಾರ ಕೊಡಲು

ಬಾಧ್ಯಸ್ಥರು ಇರದೇ ಇದ್ದರೂ ಕೂಡಾ ಎದುರುದಾರರ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನನ್ನ ಸ್ವಂತ ಆದಾಯ ಇರುವುದಿಲ್ಲ ಅಂತಾ ಪ್ರಮಾಣಪತ್ರ ಹಾಕಿದ್ದೇನೆ.

**: ಮರುವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
Sd/-
(ಶ್ರೀ. ಮಹೇಶ ಎಸ್.ಪಾಟೀಲ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್